ಪಡುತ್ತಿದ್ದ. ಕಾಡಿನ ಬಾಗಿಲಿನಲ್ಲಿ ಉದುರಿ ಬಿದ್ದಿರುವ ಅನಾಮಿಕ ಹೂವೊಂದನ್ನೆತ್ತಿಕೊಂಡು ಅದು ಯಾವ ಮರದ್ದಿರಬಹುದು ಎಂದು ಮೇಲೆ ನೋಡುತ್ತಿದ್ದ. ಅದರ ತಾಯಿ ಮರ ಸಿಕ್ಕಿ ಬಿಟ್ಟರೆ, ತಾನೇ ಅದನ್ನು ಕಂಡು ಹಿಡಿದು ಬಿಟ್ಟರೆ, ಅದರ ಬಗ್ಗೆ ಏನಾದರೂ ಕೊಂಚ ತಿಳಿದುಕೊಂಡರೆ ತನ್ನ ಆ ದಿನ ಸಾರ್ಥಕವಾದಂತೆ ವಿಚಿತ್ರ ಉಲ್ಲಾಸವೊಂದು ಅವನನ್ನು ಆವರಿಸುತ್ತಿತ್ತು. ಇನ್ನು ಸಿಕ್ಕಿದ ಹೂವಿನ ಕುಲ, ಗೋತ್ರ, ಹೆಸರುಗಳು ಪತ್ತೆಯಾಗದೇ ಉಳಿದರೆ ಅದು ಮುಂಬಾಳಿನ ಮಹದುದ್ದೇಶವಾಗಿ ಅವನ ನಾಳೆಗೆ ವರ್ಗಾವಣೆಯಾಗುತ್ತಿತ್ತು. ಅದು ಯಾವ ಹೂವು, ಅದನ್ನು ಯಾವ ಪಕ್ಷಿ ತಿನ್ನುತ್ತದೆ, ಅದರ ಸುತ್ತ ಜರುಗುವ ಆಗುಹೋಗುಗಳಾದರೂ ಎಂಥವು ಎಂಬೆಲ್ಲ ಮಾಹಿತಿಗಳನ್ನು ತನ್ನ ಹಗಲುಗಳ ನಿರುಪಾಯ ಕ್ಷಣಗಳಲ್ಲಿ ತುಂಬಿಕೊಳ್ಳುತ್ತಿದ್ದ.

'ಮಾಮೂ... ಇದೀಯಾ?'

ಮುನ್ನಿಯ ಕರೆ ಮತ್ತೊಮ್ಮೆ ಕೇಳಿತು.

ಮುನೀರ ಕತ್ತಲ ನಡುವೆ ಬೆಳಕನ್ನು ಕಂಡ ಪತಂಗದಂತೆ ಅತ್ತ ಧಾವಿಸಿದ.

* * *

ಇನ್ನೇನು ಕೋಶ ತೊರೆಯಲಿರುವ ಚಿಟ್ಟೆಯಂತಾಗಿದ್ದ ಮುನ್ನಿ, ದೀಪಾವಳಿಗೆ ಮನೆಗೆ ಬಂದ ಅಣ್ಣ ತಾಂಬೆಯ ಕೈಯಲ್ಲಿರುವ ಹೊಚ್ಚ ಹೊಸ ಐಫೋನನ್ನು ನೋಡಿದ್ದಕ್ಕಿಂತ ಅದರ ಬೆಲೆಯನ್ನು ಕೇಳಿದಾಗ ಅವನಿಗೆ ಹೆಚ್ಚು ಥ್ರಿಲ್ ಆಗಿತ್ತು. ತನ್ನೂರಿನ ಇತರ ಹತ್ತಾರು ಹುಡುಗರಷ್ಟೇ ಸಾಮಾನ್ಯನಾಗಿ ಡಿಗ್ರಿ ಮುಗಿಸಿ, ತ್ಯಾನಂದೂರು ಪೇಟೆ ಬೇದ್ರೆ ವಸ್ತ್ರಾಲಯದ ಮುನ್ನೂರೈವತ್ತು ರೂಪಾಯಿಯ ಪ್ಯಾಂಟು, ಶರ್ಟನ್ನೇ ಅತ್ಯಂತ ದುಬಾರಿ ಎಂಬಂತೆ ತೊಟ್ಟುಕೊಂಡು ಬೆಂಗಳೂರಿಗೆ ಕೆಲಸ ಹುಡುಕಿ ಹೋಗಿದ್ದ ಅಣ್ಣನೀಗ ಎರಡು ವರ್ಷಗಳ ಬಳಿಕ ಎರಡೂವರೆ ಸಾವಿರದ ಶೂವನ್ನೂ, ಒಂದೂವರೆ ಸಾವಿರದ ಪೀಟರ್ ಇಂಗ್ಲೆಂಡ್ ಜೀನ್ಸ್, ಟೀ ಶರ್ಟನ್ನೂ ತೊಟ್ಟು ಬಂದಿರುವ ಅದ್ಭುತ ರೂಪಾಂತರವ ಕಂಡಾಗಲಂತೂ ಅವನಿಗೆ ರೋಮಾಂಚನವೇ ಆಗಿತ್ತು. ತೀರಾ ಬೆಂಗಳೂರಿಗೆ ಹೋಗುವ ಹಿಂದಿನ ದಿನವೂ ಅಣ್ಣನಿಗೆ 'ತೊಲಗಿ ಹೋಗು' ಎಂದು ಬೈದಿದ್ದ ಅಪ್ಪನೀಗ ದೊಡ್ಡ ಸ್ನೇಹಿತನೊಬ್ಬನ ಜೊತೆ ಹರಟುವಂತೆ ಅವನ ಜೊತೆ ಮಾತಾಡುತ್ತಿರುವುದನ್ನು ನಂಬುವುದಕ್ಕೇ ಅವನಿಗೆ ಕಷ್ಟವಾಗಿತ್ತು. 'ದುಡಿದರೆ ಅಣ್ಣನಂತೆ ದುಡಿಯಬೇಕು' ಎಂಬೊಂದು ಸಿದ್ಧಾಂತವನ್ನು ತನಗೇ ಗೊತ್ತಿಲ್ಲದೆ, ಭೌತಶಾಸ್ತ್ರದ ಯಾವುದೋ ಸೂತ್ರದಂತೆ ಬಾಯಿಪಾಠ ಮಾಡಿಕೊಂಡ ಮುನ್ನಿ, ತಾನೂ ಅಣ್ಣನ ಹಾಗೇ ರಾಯಲ್ ಡ್ರೆಸ್ಸಿನಲ್ಲಿ ದುಬಾರಿ ಮೊಬೈಲು ಹಿಡಿದು ಮನೆಗೆ ಬರುವ ಕ್ಷಣವನ್ನು ಕಲ್ಪಿಸಿಕೊಂಡ. ಅವನ ಬದುಕಿನ ಪ್ರಶ್ನೆಗಳೀಗ 'ಭಾನುವಾರ ಎಲ್ಲಿ ಕ್ರಿಕೆಟ್ ಆಡೋದು?' ಎಂಬಲ್ಲಿಂದ 'ಇಂಜಿನಿಯರಿಗ್ ಮಾಡ್ಲಾ ಅಥವಾ ಎಂಬಿಎ ಮಾಡ್ಲಾ?' ಎಂಬಲ್ಲಿಗೆ ಹೊರಳಿಕೊಂಡಿದ್ದವು.

ತನ್ನ ಪ್ರತೀ ಮಾತಿಗೂ ಬೈಯುವ ಅಪ್ಪ ಹಾಗೂ 'ನಿನ್ನ ಬ್ಯಾಗಿನಲ್ಲಿರುವ ಒಂದೊಂದು ನೋಟ್ಬುಕ್ಕೂ ನಾ ಹೇಳಿದ ಅನುಕ್ರಮದಲ್ಲೇ ಇರಬೇಕು' ಎಂಬಂತೆ ತನ್ನನ್ನು ನಿಯಂತ್ರಿಸುತ್ತಿದ್ದ ಅಮ್ಮನ ಮಧ್ಯೆ, ತನ್ನನ್ನು ತಾನು ಹೇಗಿದ್ದೇನೋ ಹಾಗೇ ಸ್ವೀಕರಿಸುವ ಮುನೀರ ಅತ್ಯಾಪ್ತನೆನಿಸುತ್ತಿದ್ದ ಮುನ್ನಿಗೆ. ಮುನೀರ ಬೆಂಗಳೂರಿನ ಕೆಲಸ ಬಿಟ್ಟು ಬಂದಿದ್ದಾನೆ, ತೀರಿ ಹೋದ ಅಪ್ಪನನ್ನೇ ನೆನೆದು ಕೊರಗುತ್ತಾ ಸಮಯ ಕಳೆಯುತ್ತಿದ್ದಾನೆ, ಏನೂ ಕೆಲಸ ಮಾಡುತ್ತಿಲ್ಲ ಎಂಬೆಲ್ಲ ಆರೋಪಗಳ ಪೈಕಿ ಒಂದಾದರೂ ಅವನಿಗೆ ಅಸಲೀ ದೋಷದಂತೆ ಕಂಡಿರಲಿಲ್ಲ. ಸಂಜೆ ಶಾಲೆಯಿಂದ ಬಂದೊಡನೆ ಶಾಸ್ತ್ರಕ್ಕೆಂಬಂತೆ ತಿಂಡಿ ತಿಂದು, ಕಾಫಿ ಕುಡಿದು, ಮನೆಯಂಗಳದಲ್ಲೋ ಇಲ್ಲಾ ತೋಟದಲ್ಲೋ ಮರವೊಂದರ ಕೆಳಗೆ ಅದರದ್ದೇ ಬೇರು-ಬಿಳಲಿನಂತೆ ಸ್ತಬ್ಧವಾಗಿ ಕುಳಿತಿರುತ್ತಿದ್ದ ಮುನೀರನ ಬಳಿಗೆ ಓಡುತ್ತಿದ್ದ. ತನ್ನ ಮನಸ್ಸಿನಲ್ಲಿ ಸುಮ್ಮನೆ ಹಾದು ಹೋದ ಯೋಚನೆಗಳಿಂದ ಹಿಡಿದು ತರಗತಿಯಲ್ಲಿ ನಡೆದ ಪೆನ್ಸಿಲ್-ಪೆನ್ ಜಗಳದ ತನಕ ಎಲ್ಲವನ್ನೂ ನೇರವಾಗಿ ಅವನಿಗೆ ಹೇಳಿಬಿಡುತ್ತಿದ್ದ. ಅವನ ಮಾತನ್ನು ಕೇಳುವಾಗೆಲ್ಲ ಮುನೀರನಿಗೆ ತನ್ನ ಬಾಲ್ಯದ ಯಾವುದೋ ಭಾಗವೊಂದು ಮರುಪ್ರಸಾರವಾಗುತ್ತಿರುವಂತೆ ಭಾಸವಾಗುತ್ತಿತ್ತು. ನಿಂತ ನಿಂತಲ್ಲೇ ತಾನು ಮತ್ತೆ ನೀಲಿ ಅಂಗಿಯ ಶಾಲಾ ಬಾಲಕನಾಗಿ, ಅವನ ಕಥೆಯೊಳಗಿನ ಪಾತ್ರಧಾರಿಯಾಗಿ